ಕೃಷಿ ವಿವಿ ದೂರ ಶಿಕ್ಷಣದ ಡಿಪ್ಲೊಮಾ, ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಅರ್ಜಿ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ 2026-27ನೇ ಸಾಲಿನ ಎರಡು ಡಿಪ್ಲೋಮಾ ಮತ್ತು ನಾಲ್ಕು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಏ.11 ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ.

ಡಿಪ್ಲೊಮಾ ಕೋರ್ಸ್‌ಗಳಾದ ಒಂದು ವರ್ಷದ ಕೃಷಿ ಕೋರ್ಸ್‌ಗೆ 10 ಸಾವಿರ ರೂ. ಶುಲ್ಕ ಇರಲಿದ್ದು, 10ನೇ ತರಗತಿ ಪಾಸಾದವರು ಅರ್ಜಿ ಸಲ್ಲಿಸಬಹುದಾಗಿದೆ. ಒಂದು ವರ್ಷದ ಸ್ನಾತಕೋತ್ತರ ಕೃಷಿ ಡಿಪ್ಲೊಮಾ ಕೋರ್ಸ್‌ಗೆ 12 ಸಾವಿರ ರೂ. ಶುಲ್ಕ ಇರಲಿದ್ದು, ಕೃಷಿ ಪದವೀಧರರು ಅರ್ಜಿ ಸಲ್ಲಿಸಬಹುದಾಗಿದೆ. ಸರ್ಟಿಫಿಕೇಟ್ ಕೋರ್ಸ್‌ಗಳಾದ ಕೃಷಿಯಲ್ಲಿ ಬೀಜೋತ್ಪಾದನೆ ತಾಂತ್ರಿಕತೆಗಳು ಕೋರ್ಸ್‌ಗೆ 10ನೇ ತರಗತಿ ಉತ್ತೀರ್ಣರಾದವರು ಅರ್ಜಿ ಸಲ್ಲಿಸಬಹುದಾಗಿದೆ. ಕೃಷಿಯಲ್ಲಿ ಯಂತ್ರೋಪಕರಣ ನಿರ್ವಹಣೆ, ಜೇನು ಸಾಕಣೆ, ಸಮಗ್ರ ಕೃಷಿ ಕೋರ್ಸ್‌ಗಳು ಲಭ್ಯವಿದ್ದು, ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಆಸಕ್ತ ಅಭ್ಯರ್ಥಿಗಳು ಕೃಷಿ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಕೃಷಿ ಕೇಂದ್ರಗಳಾದ ರಾಮನಗರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಅಥವಾ ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್ ಮೂಲಕ ಅರ್ಜಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ನಿಗದಿತ ಶುಲ್ಕದ ಜತೆಗೆ ಜಿಕೆವಿಕೆ ಕ್ಯಾಂಪಸ್‌ನಲ್ಲಿರುವ ದೂರ ಶಿಕ್ಷಣ ಘಟಕಕ್ಕೆ ಏ.11ರ ಮಧ್ಯಾಹ್ನ 12.30 ರೊಳಗೆ ಸಲ್ಲಿಸಬೇಕು ಎಂದು ವಿವಿ ಪ್ರಕಟಣೆ ತಿಳಿಸಿದೆ.

V-karnataka pg 07

ಅವಕಾಶ ₹1.50 ಲಕ್ಷ ಪಾವತಿಸಿ ಸಕ್ರಮ ಮಾಡಿಕೊಳ್ಳಲು ಸೂಚನೆ

ಕೃಷಿ ಪಂಪ್‌ಸೆಟ್ ಅಕ್ರಮ ಸಕ್ರಮಕ್ಕೆ 3 ತಿಂಗಳ ಗಡುವು: ಸಚಿವ ಜಾರ್ಜ್

• **ಕನ್ನಡಪ್ರಭ ವಾರ್ತೆ** ವಿಧಾನಪರಿಷತ್ತು



ಕೃಷಿ ಪಂಪ್‌ಸೆಟ್‌ಗಳಿಗೆ ಅಕ್ರಮ ವಿದ್ಯುತ್ ಸಂಪರ್ಕ ಪಡೆದಿರುವುದನ್ನು ₹1.50 ಲಕ್ಷ ಪಾವತಿಸಿ ಸಕ್ರಮ ಮಾಡಿಕೊಳ್ಳಲು ಮೂರು ತಿಂಗಳ ಸಮಯಾವಕಾಶ ನೀಡಲಾಗಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ಜೆಡಿಎಸ್ ಗೋವಿಂದರಾಜು ಅವರ ಪ್ರಶ್ನೆಗೆ ಉತ್ತರಿಸಿದ ಕೆ.ಜೆ.ಜಾರ್ಜ್ ಅವರು, ಕೃಷಿ ಪಂಪ್‌ಸೆಟ್‌ಗಳ ಅಕ್ರಮ ಸಂಪರ್ಕವನ್ನು ಸಕ್ರಮ ಮಾಡಲು 2004ರಲ್ಲಿ ಅಕ್ರಮ-ಸಕ್ರಮ ಯೋಜನೆ ಜಾರಿಗೊಳಿಸಲಾಗಿದೆ. ಇದರಲ್ಲಿ ಮೂಲಸೌಕರ್ಯ ಒದಗಿಸಲು ಅಕ್ರಮ ಸಂಪರ್ಕ ಪಡೆದಿರುವವರು ₹4.50 ಲಕ್ಷ ಪಾವತಿಸಬೇಕೆಂದಿತ್ತು. ಆದರೆ, ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಿ ₹3 ಲಕ್ಷ ಮನ್ನಾ ಮಾಡಿ, ₹1.50 ಲಕ್ಷ ಪಾವತಿಸಿದವರಿಗೂ ಸಕ್ರಮ ಮಾಡಿಕೊಡಲಾಗುತ್ತಿದೆ. ಹೀಗೆ ಸಕ್ರಮ ಮಾಡಿಕೊಳ್ಳಲು ಒಂದು ಗಡುವು ನಿಗದಿ ಮಾಡಬೇಕೆಂದು ನಿರ್ಧರಿಸಿ, 3 ತಿಂಗಳ ಕಾಲಾವಕಾಶ ನೀಡಲಾಗಿದೆ. ಆದರೂ, ಹಲವರು ಇನ್ನೂ ಹಣ ಪಾವತಿಸಲು ಮುಂದಾಗಿಲ್ಲ ಎಂದರು.

24 ಸಾವಿರ ಕೋಟಿ ಸಬ್ಸಿಡಿ: ಇನ್ನು, ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಸಲು ನೀಡಲಾಗುವ ಸಬ್ಸಿಡಿ ಮೊತ್ತ ವಾರ್ಷಿಕ ₹24 ಸಾವಿರ ಕೋಟಿಗಳಾಗುತ್ತದೆ. ಆದರ ಜತೆಗೆ ಗೃಹ ಜ್ಯೋತಿ ಯೋಜನೆಗಾಗಿ ವಾರ್ಷಿಕವಾಗಿ ₹9 ಸಾವಿರ ಕೋಟಿ ಬೇಕಾಗಲಿದೆ. ಈ ಎರಡಕ್ಕೂ ರಾಜ್ಯ ಸರ್ಕಾರದಿಂದಲೇ ಅನುದಾನ ನೀಡಲಾಗುತ್ತದೆ. ಆದರಿಂದಾಗಿ ಎಸ್ಕಾಂಗಳಿಗೆ ಕೃಷಿ ಪಂಪ್‌ಸೆಟ್ ಸಬ್ಸಿಡಿ ಮತ್ತು ಗೃಹಲಕ್ಷ್ಮೀ ಯೋಜನೆಗಳು ಹೊರೆಯಾಗುವುದಿಲ್ಲ ಎಂದು ಹೇಳಿದರು.

ರಾಜ್ಯದ ವಿದ್ಯುತ್ ಸರಬರಾಜು ಸಂಸ್ಥೆ (ಎಸ್ಕಾಂ)ಗಳು ಸದ್ಯ ₹42 ಸಾವಿರ ಕೋಟಿ ದೀರ್ಘಾವಧಿ ಸಾಲ ಹೊಂದಿದ್ದು, ಅದರಲ್ಲಿ ಬೆಸ್ಕಾಂ ಒಂದೇ ಸಂಸ್ಥೆ ₹17,556 ಕೋಟಿ ಸಾಲ ಹೊಂದಿದೆ. ಇನ್ನು, ಕೆಪಿಎಸ್‌ಎಲ್‌ಗೆ 2005ರಿಂದ ₹3,478 ಕೋಟಿ ಬಾಕಿ ನೀಡಬೇಕಿತ್ತು. ₹5,277 ಕೋಟಿ ಬಡ್ಡಿ ಮತ್ತು ದಂಡ ಸೇರಿ ಅದೀಗ ₹8,755 ಕೋಟಿಗಳಾಗಿದೆ. ಅಷ್ಟು ಮೊತ್ತ ಪಾವತಿಸುವುದು ಕಷ್ಟವಾಗುತ್ತಿದೆ ಎಂದು ಅವರು ಹೇಳಿದರು.

Kannadaprabha pg 08

ಟೊಮೆಟೋ ಬೆಲೆ 1200ರಿಂದ 80 ರು.ಗೆ ಕುಸಿತ; ರೈತ ಕಂಗಾಲು

ಹೆಚ್ಚು ಟೊಮೆಟೋ ಬೆಳೆದಿರುವ ರೈತ ವರ್ಗ ಬಿಸಿಲಿಗೆ ಬೇಗ ಹಣ್ಣಾಗುತ್ತಿರುವ ಟೊಮೆಟೋ

• **ಕನ್ನಡಪ್ರಭ ವಾರ್ತೆ** ಹೊಸಪೇಟೆ



ಟೊಮೆಟೋ ಬೆಲೆ ದಿಢೀರ್ ಕುಸಿದ ಹಿನ್ನೆಲೆಯಲ್ಲಿ ವಿಜಯನಗರ ಜಿಲ್ಲೆಯ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಕಳೆದ ವಾರ ₹1000 ರಿಂದ ₹1200 ಇದ್ದ ಒಂದು ಬಾಕ್ಸ್ ಟೊಮೆಟೋ ಬೆಲೆ ಈಗ ₹80 ರಿಂದ ₹100ಕ್ಕೆ ಕುಸಿದಿದೆ. ಕೇಜಿಗೆ ₹20 ರಿಂದ ₹30 ಇದ್ದ ದರ ದಿಢೀರನೆ ₹20ಕ್ಕೆ 3 ಕೇಜಿಯಂತೆ ಮಾರಾಟವಾಗುತ್ತಿದೆ. ಇದರಿಂದ ಬೆಳೆಗಾರರು ಆತಂಕಕ್ಕೆ ಒಳಗಾಗಿದ್ದಾರೆ.

ಈ ಬಾರಿ ರೈತರು ಹೆಚ್ಚು ಟೊಮೆಟೋ ಬೆಳೆದಿದ್ದಾರೆ. ಬಿಸಿಲ ವಾತಾವರಣದಿಂದಾಗಿ ಕಾಯಿಗಳು ಬೇಗನೆ ಹಣ್ಣಾಗುತ್ತಿವೆ. ಹೊರ ರಾಜ್ಯಗಳಲ್ಲೂ ಟೊಮೆಟೋ ಹೆಚ್ಚಾಗಿ ಬೆಳೆದಿರುವುದರಿಂದ ಇಲ್ಲಿನ ರೈತರು ಬೆಳೆದದ್ದು ರವಾನೆಯಾಗುತ್ತಿಲ್ಲ. ಹೀಗಾಗಿ, ರೈತರು ಬೆಳೆದಿದ್ದನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ ಸಾರಿಗೆ ವೆಚ್ಚ ಸಹ ಬಾರದೇ ರೈತರು ಪರದಾಡುತ್ತಿದ್ದಾರೆ. ಬೆಲೆ ಕುಸಿತದಿಂದ ರೈತರು ಕಂಗಾಲಾಗಿದ್ದಾರೆ. ಮಾರುಕಟ್ಟೆಗೆ ಒಯ್ದರೆ ಕಟಾವು ಮತ್ತು ಸಾಗಾಣಿಕೆ ವೆಚ್ಚವೂ ಬರುವುದಿಲ್ಲ ಎಂದು ರೈತರು ಹೊಲದಲ್ಲಿಯೇ ಬಿಡುತ್ತಿದ್ದಾರೆ.

Kannadaprabha pg 08